ಮೂಲ ದಾವಾ ನಂಃ 29/2022
ಡಿ. ಡಬ್ಲುಃ 02.

ಸಾಕ್ಷಿಯನ್ನು ದಿನಾಂಕಃ **11.09.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ನಾವು ಮೂಲತಃ ಸಂಶಿಯ ಕುದ್ರಿಗಿ ಗ್ರಾಮದವರು. ನಾವು ಸದ್ರಿ ಗ್ರಾಮದಲ್ಲಿ ಸುಮಾರು 70 ವರ್ಷಗಳಿಂದ ವಾಸವಾಗಿದ್ದೇವೆ. ನಾನು 30 ವರ್ಷಗಳಿಂದ ದುಬೈನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ನನ್ನ ಕೆಲಸ ಕಾರ್ಯಗಳಿದ್ದಾಗ ನಮ್ಮ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತೇನೆ. ಪ್ರತಿವಾದಿಯರು ಮೂಲತಃ ನಮ್ಮ ಕುದ್ರಿಗಿ ಗ್ರಾಮದವರಲ್ಲ, ಆದರೆ ಅವರು ಮಹಿಮೆ ಗ್ರಾಮದವರಾಗಿದ್ದಾರೆ. ಕುದ್ರಿಗಿ ಮತ್ತು ಮಹಿಮೆ ಗ್ರಾಮದ ನಡುವಿನ ವ್ಯತ್ಯಾಸ ಅಂದಾಜು 1 ಕಿ.ಮಿ. ಆಗಿರುತ್ತದೆ. ನನಗೆ ಪ್ರತಿವಾದಿಯರ ಪರಿಚಯ ಇರುತ್ತದೆ. 8 ನೇ ಪ್ರತಿವಾದಿಯ ಪರಿಚಯ ನನಗೆ ನಾನು ಅವರಿಂದ ದಾವಾ ಜಂಪ್ರಾ ನಂಃ 10 ಸ್ಥಳವನ್ನು ಖರೀದಿ ಮಾಡುವ 5 ವರ್ಷಗಳ ಹಿಂದೆ ಆಗಿರುತ್ತದೆ.

ವಾದಿಯರ ಪರಿಚಯ ನನಗಿರುವುದಿಲ್ಲ. ದಾವಾ ಹೂಡಿದ ನಂತರವೇ ವಾದಿಯರು ಯಾರೆಂದು ಈ ಕೋರ್ಟಿಗೆ ಬಂದ ನಂತರವೇ ಗೊತ್ತಾಗಿರುತ್ತದೆ. ವಾದಿಯರಿಗೆ 8 ನೇ ಪ್ರತಿವಾದಿ ಯಾವ ರೀತಿ ಸಂಬಂಧ ಎಂಬುದನ್ನು ನಾವು ತಿಳಿದುಕೊಂಡಿಲ್ಲ. ವಾದಿಯರು 8 ನೇ ಪ್ರತಿವಾದಿಯ ಸಹೋದರರೆಂದರೆ ಸರಿಯಲ್ಲ.

ದಾವಾ ಜಂಪ್ರಾ ನಂಃ10 ರ ಸ್ಥಳವನ್ನು ನಾನು 8 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದೇನೆ. ಸದ್ರಿ ಸ್ಥಳವನ್ನು ಮಾರಾಟ ಮಾಡುವುದಾಗಿ 8 ನೇ ಪ್ರತಿವಾದಿಯು ನಮಗೆ ತಿಳಿಸಿದ್ದರು. ಸದ್ರಿ ಸ್ಥಳವನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ಮತ್ತು ನಮ್ಮ ಭಾವನಾದ ಮಹಮ್ಮದ್ ಇಸ್ಮಾಯಿಲ್‌ರವರು ಕೂಡಿಕೊಂಡು 1 ರಿಂದ 8 ನೇ ಪ್ರತಿವಾದಿಯರನ್ನು ಭೇಟಿ ಮಾಡಿದ್ದೇವೆ. ಸದ್ರಿ ದಾವಾ ಜಂಪ್ರಾ ನಂಃ 10 ರ ಸ್ಥಳವನ್ನು ಖರೀದಿ ಮಾಡುವ ಪೂರ್ವದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳಾದ ಆರ್.ಟಿ.ಸಿ. ಹಾಗೂ ಇನ್ನಿತರ ದಾಖಲೆಗಳನ್ನು ಪ್ರತಿವಾದಿಯರು ನಮಗೆ ನೀಡಿದ್ದರು. ಆದರೆ ಇನ್ನುಳಿದ ದಾಖಲೆಗಳು ಯಾವವು ಎಂಬುದನ್ನು ನನಗೆ ಈಗ ಹೇಳಲು ಆಗುವುದಿಲ್ಲ.

ನಾನು ಕಂದಾಯ ಇಲಾಖೆಗೆ ಅರ್ಜಿ ನೀಡಿ ದಾವಾ ಜಂಪ್ರಾ ನಂಃ 10 ರ ಸ್ಥಳಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತೆಗೆಸಿಲ್ಲ, ಆದರೆ ಪ್ರತಿವಾದಿಯರು ನೀಡಿದ ದಾಖಲೆಗಳನ್ನು ಆರ್.ಎಸ್.ಕೆ. ವಕೀಲರಿಗೆ ತೋರಿಸಿ ಅವರ ಮಾಹಿತಿಯನ್ನು ಪಡೆದುಕೊಂಡು ಆನಂತರ ದಾವಾ ಜಂಪ್ರಾ ನಂಃ 10 ರ ಸ್ಥಳವನ್ನು ಖರೀದಿ ಮಾಡಿದ್ದೇವೆ. ಆರ್.ಎಸ್.ಕೆ. ವಕೀಲರು ಸದ್ರಿ ದಾವಾ ಜಂಪ್ರಾ ನಂಃ 10 ರ ಸ್ಥಳವು ಯಾರಿಂದ ಯಾರಿಗೆ ಮತ್ತು ಯಾವ ರೀತಿ ಬಂದಿದೆ ಎಂಬುದು ನಮಗೆ ವಿವರಿಸಿದ್ದರು. ದಾವಾ ಜಂಪ್ರಾ ನಂಃ 10 ರ ಸ್ಥಳವು 8 ನೇ ಪ್ರತಿವಾದಿಯರಿಗೆ ಸೇರಿದ್ದು ಹಾಗೂ ಸದ್ರಿ ಸ್ಥಳವು 8 ನೇ ಪ್ರತಿವಾದಿಗೆ ಅವರ ಅಜ್ಜಿಯಿಂದ ಬಂದಿದೆ ಎಂಬುದಾಗಿ ತಿಳಿಸಿದ್ದರು, ಆದರೆ ಅವರ ಅಜ್ಜಿಯ ಹೆಸರು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯ ತಂದೆಯ ಹೆಸರು ಜೈನುದ್ದೀನ್ ಆಗಿರುತ್ತದೆ. ತಾಯಿಯ ಹೆಸರು ರೆಹಮಾತುನೀಸ್ ಆಗಿರುತ್ತದೆ.

ವಾದಿಯರ ತಂದೆ ತಾಯಿಯವರ ಹೆಸರು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯ ಮಾತನ್ನು ಕೇಳಿ ನಾವು ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡಿದ್ದೇವೆ. ನಾವು ದಾವಾ ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡುವ ಪೂರ್ವದಲ್ಲಿ 8 ನೇ ಪ್ರತಿವಾದಿಯ ಅಣ್ಣ ತಮ್ಮಂದಿರು ಇದ್ದಾರಾ ಎಂದು ಚೌಕಾಸಿ ಮಾಡಿದ್ದೀರಾ ಎಂದಾಗ ಸಾಕ್ಷಿಯು ಅಣ್ಣ ತಮ್ಮಂದಿರು ಇಲ್ಲ ಎಂಬುದಾಗಿ ನುಡಿದಿದ್ದಾರೆ. ವಾದಿ ಹಾಗೂ 1 ರಿಂದ 8 ನೇ ಪ್ರತಿವಾದಿಯರು ನಮ್ಮ ಸಂಬಂಧಿಕರಲ್ಲ. ನಾನು 8 ನೇ ಪ್ರತಿವಾದಿಯ ತಾಯಿಯನ್ನು ನೋಡಿಲ್ಲ. 1 ನೇ ವಾದಿಯು ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದ್ದೀರಾ ಎಂದಾಗ ಸಾಕ್ಷಿಯು 1 ನೇ ವಾದಿಯು ಯಾರೆಂಬುದು ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ.

ವಾದಿಯು ತನ್ನ ಸಾಕ್ಷ್ಯ ವಿಚಾರಣೆಯ ಕಾಲಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿದ್ದಾರಾ ಎಂದಾಗ ಸಾಕ್ಷಿಯು ನಾವು ವಂಶವೃಕ್ಷವನ್ನು ತೆಗೆಸಿ ನೋಡಿದಾಗ ವಾದಿಯರ ಹೆಸರು ಇರಲಿಲ್ಲ ಎಂಬುದಾಗಿ ನುಡಿದಿದ್ದಾರೆ. 8 ನೇ ಪ್ರತಿವಾದಿಯು ನನಗೆ ಅಣ್ಣ ತಮ್ಮ ಯಾರೂ ಇಲ್ಲ ಹಾಗೂ ಅಕ್ಕ ತಂಗಿಯವರು ಯಾರೂ ಇಲ್ಲ ಎಂಬುದಾಗಿ ಹೇಳಿದ್ದರಿಂದ ನಾವು ಸದ್ರಿ ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡಿದ್ದೇವೆ. ವಾದಿಯರು ತಾವು 8 ನೇ ಪ್ರತಿವಾದಿಯರ ಸಹೋದರರು ಎನ್ನುವುದಕ್ಕೆ ಪೂರಕವಾಗಿ ವಂಶವೃಕ್ಷವನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಕ್ರಯ ದಸ್ತಾವೇಜನ್ನು ಬರೆಸಲು ನಾನೇ ಮಾಹಿತಿಯನ್ನು ನೀಡಿದ್ದೇನೆ.

ನಾನು ದಾವಾ ಸ್ಥಳವನ್ನು ರೂ.2,90,000/- ಪ್ರತಿಫಲಕ್ಕೆ ಖರೀದಿ ಮಾಡಿದ್ದು, ಸದ್ರಿ ಹಣವನ್ನು 8 ನೇ ಪ್ರತಿವಾದಿಗೆ ನೀಡಿದ್ದೇನೆ.

ದಾವಾ ಜಂಪ್ರಾ ನಂಃ 10ರ ಸ್ಥಳವು ವಾದಿ ಪ್ರತಿವಾಯರ ಜಂಟಿ ಕುಟುಂಬದ ಆಸ್ತಿ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿವೆ ಎಂದರೆ ಸರಿಯಲ್ಲ. ದಾವಾ ದಾವಾ ಜಂಪ್ರಾ ನಂಃ 10ರ ಸ್ಥಳವು ವಾದಿ ಮತ್ತು 8 ನೇ ಪ್ರತಿವಾದಿಯವರ ತಾಯಿ ರೆಹಮತುನ್ನಿಸಾ ಮರಣದ ತರುವಾಯ ವಾರಸಾ ಮೂಲಕ ಅವರಿಗೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಜಂಪ್ರಾ ನಂಃ 10ರ ಸ್ಥಳವು ವಾದಿ ಹಾಗೂ 8 ನೇ ಪ್ರತಿವಾದಿಯರ ಸಾಮಾಯಿಕ ಹಕ್ಕಿನ ಸ್ಥಳವಾಗಿತ್ತು ಎಂದರೆ ಸರಿಯಲ್ಲ. ನಾನು ದಾವಾ ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡುವ ಪೂರ್ವದಲ್ಲಿ ಸದ್ರಿ ಸ್ಥಳದ ಬಗ್ಗೆ ಮಾಹಿತಿಯನ್ನು ಪಡೆಯದೇ ಕೇವಲ 8 ನೇ ಪ್ರತಿವಾದಿಯ ಮಾತನ್ನು ಕೇಳಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಜಂಪ್ರಾ 10 ರ ಸ್ಥಳದ ಪ್ರಾಮಾಣಿಕ ಖರೀದಿದಾರನಲ್ಲ ಎಂದರೆ ಸರಿಯಲ್ಲ.

ಸದ್ರಿ ದಾವಾ ಜಂಪ್ರಾ ನಂಃ 10ರಲ್ಲಿ ವಾದಿಯರಿಗೆ ಹಕ್ಕಿದೆ ಎಂದರೆ ಸರಿಯಲ್ಲ. 1 ರಿಂದ 8 ನೇ ಪ್ರತಿವಾದಿಯರು ವಾದಿಯರ ಬೆನ್ನ ಹಿಂದೆ ಅವರಿಗೆ ತಿಳಿಯದಂತೆ ದಿನಾಂಕಃ 25.09.2018 ರಂದು ಒಂದು ಕೃತ್ರಿಮ ತೋಂಡಿ ಕರಾರು ಪ್ರತಿಯನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಸದ್ರಿ ದಾವಾ ಜಂಪ್ರಾ ನಂಃ 10ರ ಸ್ಥಳದ ಖರೀದಿಯು ವಾದಿಯರಿಗೆ ಬಂಧನಕಾರಿಯಲ್ಲ ಎಂದರೆ ಸರಿಯಲ್ಲ.

ದಾವಾ ಜಂಪ್ರಾ ನಂಃ 10 ರಲ್ಲಿ ವಾದಿಯರಿಗೆ ಹಕ್ಕಿರುವ ವಿಷಯ ನನಗೆ ತಿಳಿದೂ ತಿಳಿದು ಹಾಗೂ ವಾದಿಯರು ಹೊರದೇಶದಲ್ಲಿ ವಾಸವಿರುವ ವಿಷಯ ನನಗೆ ತಿಳಿದು ನಾನು ದುರುದ್ದೇಶದಿಂದ ದಾವಾ ಜಂಪ್ರಾ ನಂಃ 10ರ ಸ್ಥಳವನ್ನು 8 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಜಂಪ್ರಾ ನಂಃ 10 ರ ಸ್ಥಳದ ಕಬ್ಜಾ ಇನ್ನುವರೆಗೆ ಪಡೆದಿಲ್ಲ ಎಂದರೆ ಸರಿಯಲ್ಲ. ದಾವಾ ಜಂಪ್ರಾ ನಂಃ 10ರ ಸ್ಥಳದಲ್ಲಿ ವಾದಿಯರ ಜೋಪಡಿ ಇದೆ ಎಂದರೆ ಸರಿಯಲ್ಲ. ವಾದಿಯರ ಜೋಪಡಿ ಯಾವ ಸರ್ವೆ ನಂಬರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ

ಜಂಪ್ರಾ ನಂಃ 10ರ  ಸ್ಥಳವನ್ನು ಖರೀದಿ ಮಾಡಿದ ನಂತರ ಸದ್ರಿ ಸ್ಥಳವನ್ನು ಸರ್ವೆ ಮಾಡಿಸಿದ್ದೇನೆ, ಸದ್ರಿ ಸರ್ವೆ ವರದಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಪ್ರತಿವಾದ ಪತ್ರವನ್ನು ಸಲ್ಲಿಸಲು ಮತ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಲು ನಮ್ಮ ವಕೀಲರಿಗೆ  ನಾನೇ ಮಾಹಿತಿಯನ್ನು ನೀಡಿದ್ದೇನೆ. ದಾವಾ ಪ್ರತಿವಾದ ಪತ್ರದ 6 ನೇ ಪ್ಯಾರಾದ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು  ದಾವಾ ಜಂಪ್ರಾ ನಂಃ 10ರ  ಸ್ಥಳವನ್ನು ಖರೀದಿ ಮಾಡಿದ 3 ತಿಂಗಳ ತರುವಾಯ ವಾದಿಯರು ಅಲ್ಲಿಗೆ ಅಂದರೆ ದಾವಾ ಜಂಪ್ರಾ ನಂಃ 10ರ  ಸ್ಥಳಕ್ಕೆ ಜೋಪಡಿ ಕಟ್ಟಲು ಬಂದಿದ್ದರು.  ಪ್ರತಿವಾದಿಯರು ರಾತ್ರಿಯ ವೇಳೆಯಲ್ಲಿ ದಾವಾ ಜಂಪ್ರಾ ನಂಃ 10ರ  ಸ್ಥಳದಲ್ಲಿ  ಜೋಪಡಿಯನ್ನು ಕಟ್ಟಲು ಬಂದಿದ್ದರು.  ಸದ್ರಿ ವಿಷಯದ ಕುರಿತಾಗಿ ನಾವು ದೂರನ್ನು ನೀಡಿದ್ದೇವೆ ಹಾಗೂ ಪಂಚಾಯತಿಯವರಿಗೆ ವಿಚಾರಿಸಿದ್ದೇವೆ. ಸದ್ರಿ ವಿಷಯದ ಕುರಿತಾದ ದಾಖಲೆಗಳು ನಮ್ಮ ಹತ್ತಿರ ಇವೆ, ಅವುಗಳನ್ನು  ಹಾಜರುಪಡಿಸಲು ನಮಗೆ ತೊಂದರೆ ಇಲ್ಲ.

ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ನಾನು  ಖರೀದಿ ಮಾಡುವ ಕಾಲಕ್ಕೆ ವಾದಿಯರ ಜೋಪಡಿ ಅಲ್ಲಿತ್ತು ಎಂದರೆ ಸರಿಯಲ್ಲ. ನಾನು ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರತಿವಾದಪತ್ರದಲ್ಲಿ ಜೋಪಡಿಯನ್ನು ಖುಲ್ಲಾಪಡಿಸಲು ಕೇಳಿದ್ದು ಇರುವುದಿಲ್ಲ. ನಾನು ದಾವಾ ಜಂಪ್ರಾ ನಂಃ 10ರ  ಸ್ಥಳದ ಪ್ರಾಮಾಣಿಕ ಖರೀದಿದಾರನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.